www.sarkariresults.io



## PART – III

## CHILD DEVELOPMENT AND PEDAGOGY

61. ವಿಕಾಸದ ಅರ್ಥ-
    (1) ಎತ್ತರ ಮತ್ತು ತೂಕದಲ್ಲಿ ಹೆಚ್ಚಳ
    (2) ಜೀವನ ಪರ್ಯಂತ, ಕ್ರಮಬದ್ಧ ಹಾಗೂ ಪ್ರಗತಿಪರ ಬದಲಾವಣೆ
    (3) ಚಿಕ್ಕವನು ವಯಸ್ಕನಾಗುವುದು
    (4) ವಯಸ್ಕ ಮುದುಕನಾಗುವುದು

62. ಒಂದು ಮಗುವಿನ ಆರಂಭಿಕ ವಿಕಾಸವು ಆಧರಿಸಿರುವ ತತ್ವ
    (1) ಸಮತಲ-ನೇರಾಭಿಮುಖ (2) ಶಿರ-ಪದಾಭಿಮುಖ
    (3) ಕೇಂದ್ರ-ಸಮತಲ ಅಭಿಮುಖ (4) ಲಂಬ ನೋಟ-ಸೀಳು ನೋಟಾಭಿಮುಖ

63. ಸಾಮಾಜಿಕ ರೀತಿ-ನೀತಿಗಳನ್ನು, ಮೌಲ್ಯಗಳನ್ನು, ಆಚಾರ-ವಿಚಾರ, ಸಂಪ್ರದಾಯ ಮುಂತಾದವುಗಳನ್ನು ಮೈಗೂಡಿಸಿಕೊಳ್ಳುವ ಕ್ರಿಯೆಯನ್ನು ಹೀಗೆ ಕರೆಯುವರು.
    (1) ಸಾಮಾನ್ಯೀಕರಣ (2) ಸಾದೃಶೀಕರಣ
    (3) ನಾಗರೀಕೀಕರಣ (4) ಸಾಮಾಜೀಕರಣ

64. ಜ್ಞಾನಾತ್ಮಕ ವಿಕಾಸದ ಹಂತಗಳ ಜೊತೆ ಜೋಡಣೆಗೊಂಡಿರುವ ಹೆಸರು-
    (1) ಪಿಯಾಜೆ (2) ಹ್ಯಾವಿಗ್ ಹರ್ಸ್ಟ್
    (3) ಗಾರ್ಡನರ್ (4) ಎರಿಕ್‌ಸನ್

65. ವೈಯಕ್ತಿಕ ವಿಭಿನ್ನತೆಗೆ ಕಾರಣವಾದ ಅಂಶಗಳು
    (1) ಆಹಾರ ಮತ್ತು ಪೌಷ್ಠಿಕಾಂಶ (2) ವಿವಿಧ ಸಮುದಾಯಗಳು
    (3) ವಿವಿಧ ಸಂಸ್ಕೃತಿಗಳು (4) ಅನುವಂಶೀಯತೆ ಮತ್ತು ಪರಿಸರ

66. ಕೆಳಕಂಡ ಈ ಮನೋವಿಜ್ಞಾನಿ ರೂಪಿಸಿರುವ ಏಳು ಬುದ್ಧಿಶಕ್ತಿಗಳಲ್ಲಿ ಸಂವೇಗಾತ್ಮಕ ಬುದ್ಧಿಶಕ್ತಿ ಒಂದು ಅಂಶವಾಗಿಲ್ಲ
    (1) ಬೀನೆ (2) ವೆಸ್ಲರ್ (3) ಗಾರ್ಡನರ್ (4) ಸ್ಪೆನ್ಸರ್

67. ಮಾನಸಿಕ ವಯಸ್ಸು (M.A.) ಎಂಬ ಪರಿಕಲ್ಪನೆಯನ್ನು ನೀಡಿದವರು
    (1) ಥರ್ಸ್ಟನ್ (2) ಟರ್ಮನ್ (3) ಮೆರಿಲ್ (4) ಬೀನೆ

68. ಒಬ್ಬ 5 ವರ್ಷ ವಯಸ್ಸಿನ ಬಾಲಿಕೆಯ ಮಾನಸಿಕ ವಯಸ್ಸು 6 ಆಗಿದ್ದರೆ, ಆಗ ಆಕೆಯ ಬುದ್ಧಿಸೂಚ್ಯಾಂಕ-
    (1) 100 (2) 110 (3) 120 (4) 130



Note: The Information Provided here is only for reference. It May vary the Original.

www.sarkariresults.io



69. ಸೃಜನಶೀಲ ಮಗುವಿನ ಪ್ರಮುಖ ಲಕ್ಷಣಗಳು
   (1) ಒಮ್ಮುಖ ಆಲೋಚನೆ, ಉತ್ತಮ ಸ್ಮೃತಿ (2) ಹೊಸತನ, ಸ್ವಂತಿಕೆ
   (3) ಉತ್ತಮ ಸ್ಮೃತಿ, ವಿಶೇಷ ಪ್ರತಿಭೆ (4) ಹೊಸತನ, ಒಮ್ಮುಖ ಆಲೋಚನೆ

70. 'ಸ್ವಾಯತ್ತತೆ ವಿರುದ್ಧ ನಾಚಿಕೆ ಮತ್ತು ಸಂಶಯ' ಎಂಬುದು ಮನೋ-ಸಾಮಾಜಿಕ ಬೆಳವಣಿಗೆ ಸಿದ್ಧಾಂತದ ಹಂತಗಳಲ್ಲಿ ಒಂದಾಗಿದ್ದು, ಇದನ್ನು ನೀಡಿದವರು.
   (1) ಎರಿಕ್ ಎರಿಕ್‌ಸನ್ (2) ರೇಮಂಡ್ ಕೆಟಲ್
   (3) ಸಿಗ್ಮಂಡ್ ಫ್ರಾಯ್ಡ್ (4) ಫ್ರೀಡ್‌ಮನ್ ಮತ್ತು ರೋಸೆನ್‌ಮನ್

71. ವಿದ್ಯಾರ್ಥಿಗಳ ವೈಯಕ್ತಿಕ ವಿಭಿನ್ನತೆಗಳನ್ನು ಸರಿದೂಗಿಸಲು ಒಬ್ಬ ಶಿಕ್ಷಕನಾದವನು
   (1) ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕು
   (2) ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ಶಿಕ್ಷಕನು ತನ್ನ ಬೋಧನಾ ಕೌಶಲಗಳನ್ನು ಹೊಂದಿಸಿಕೊಳ್ಳಬೇಕು
   (3) ವಿದ್ಯಾರ್ಥಿಗಳನ್ನು ಅವರ ಸಾಮರ್ಥ್ಯಗಳಿಗೆ ಅನುಗುಣವಾಗಿ ವಿಂಗಡಿಸಿ ಬೋಧಿಸಬೇಕು
   (4) (1) ಮತ್ತು (2) ಎರಡೂ

72. ಕೆಳಕಂಡ ಯಾವುದು ರೂಪಣಾತ್ಮಕ ಮೌಲ್ಯಮಾಪನ ಪದ್ಧತಿಯಲ್ಲ ?
   (1) ಬಹು ಆಯ್ಕೆ ಪ್ರಶ್ನೆಗಳು (2) ಮೌಖಿಕ ಪರೀಕ್ಷೆಗಳು
   (3) ಪ್ರಾಜೆಕ್ಟ್‌ಗಳು (4) ಸಂಭಾಷಣೆ ಕೌಶಲ

73. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಲಿಸುವುದು
   (1) ಉನ್ನತ ತರಗತಿ ವಿದ್ಯಾರ್ಥಿಗಳ ಜೊತೆ ಕೂರಿಸಿ
   (2) ಕೆಳಹಂತದ ತರಗತಿ ವಿದ್ಯಾರ್ಥಿಗಳ ಜೊತೆ ಕೂರಿಸಿ
   (3) ಅವರ ಅನುಕೂಲಗಳಿಗೆ ಅನುಗುಣವಾಗಿ
   (4) ವಿಷಯ ಸಮೃದ್ಧವಾದ ಬೋಧನಾ ಕಾರ್ಯಕ್ರಮಗಳೊಂದಿಗೆ

74. ನೈದಾನಿಕ ಪರೀಕ್ಷೆಗಳನ್ನು ಶಾಲೆಯಲ್ಲಿ ಬಳಸುವುದು
   (1) ಶೈಕ್ಷಣಿಕ ಸಮಸ್ಯೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚಲು
   (2) ಆರೋಗ್ಯ ಸಮಸ್ಯೆಗಳಿಗೆ ಕಾರಣಗಳನ್ನು ಗುರ್ತಿಸಲು
   (3) ವರ್ತನಾ ಸಮಸ್ಯೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚಲು
   (4) ಪಠ್ಯೇತರ (ಸಹಪಠ್ಯ) ಚಟುವಟಿಕೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗುರ್ತಿಸಲು

75. ಅಂಗವಿಕಲ ಮಕ್ಕಳಿಗಾಗಿ ಇರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹೀಗೂ ಕರೆಯುವರು
   (1) ಔಪಚಾರಿಕ ಶಿಕ್ಷಣ (2) ಅನೌಪಚಾರಿಕ ಶಿಕ್ಷಣ
   (3) ದೂರ ಶಿಕ್ಷಣ (4) ವಿಶೇಷ ಶಿಕ್ಷಣ



Note: The Information Provided here is only for reference. It May vary the Original

www.sarkariresults.io



76. ಪೂರ್ವ ಪ್ರಾಥಮಿಕ ಶಿಕ್ಷಣ ಕುರಿತು ಮರಿಯಾ ಮಾಂತೆಸೋರಿ ಮಾಡಿರುವ ಸಾಧನೆಯ ಮೇಲೆ ಪ್ರಭಾವ ಬೀರಿದವರು

(1) ಫ್ರೊಬೆಲ್ (2) ರುಡಾಲ್ಫ್‌ಸ್ಟೈನ್ನರ್

(3) ನಾರ್ಮನ್ ಬ್ರೋಸ್ಟೆರ್‌ಮನ್ (4) ಜಾನ್ ಡೂಯಿ

77. ತನ್ನ ತಮ್ಮ ಅಥವಾ ತಂಗಿ ಬಗ್ಗೆ ಮಾತ್ಸರ್ಯ ಹೊಂದಿರುವ ಹಿರಿಯ ಮಗು ತನ್ನ ತಂದೆ-ತಾಯಿಯರ ಗಮನ ಸೆಳೆಯಲು ಬೆರಳು ಚೀಪುವುದು, ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುವುದು, ಮುಂತಾದ ಎಳೆಯ ವಯಸ್ಸಿನ ಮಕ್ಕಳ ನಡವಳಿಕೆಯನ್ನು ಪ್ರದರ್ಶಿಸುತ್ತದೆ. ಇಂತಹ ಲಕ್ಷಣಗಳ ರಕ್ಷಣಾ ತಂತ್ರವು-

(1) ಪ್ರಕ್ಷೇಪಣೆ (ಬಾಹ್ಯಾರೋಪಣೆ) (2) ತಾರ್ಕಿಕ ವಾದ

(3) ಪ್ರತಿಗಮನ (ಪಲಾಯನ) (4) ಬದಲಿ ಉಪಾಯ

78. ಒಂದು ಮಗು 16 ಮತ್ತು 61 ರ ನಡುವೆ, b ಮತ್ತು d ನಡುವೆ, ಇತ್ಯಾದಿ ಗೊಂದಲಕ್ಕೆ ಒಳಗಾಗುತ್ತದೆ. ಆ ಮಗುವಿನಲ್ಲಿರಬಹುದಾದ ನ್ಯೂನತೆ ಅಥವ ದೋಷ-

(1) ಕಲಿಕಾ ನ್ಯೂನತೆ (2) ದೈಹಿಕ ನ್ಯೂನತೆ

(3) ದೃಷ್ಟಿ ನ್ಯೂನತೆ (4) ಮಾನಸಿಕ ನ್ಯೂನತೆ (ವಿಕಲತೆ)

79. ಪರಿಣಾಮಕಾರಿ ಕಲಿಕೆಗೆ ಪೂರಕವಾದ ಅಂಶ(ಗಳು) :

(1) ಆರೋಗ್ಯ (2) ಪ್ರೇರಣೆ

(3) ಕಲಿಯಬೇಕೆಂಬ ಹಂಬಲ (4) ಮೇಲಿನ ಎಲ್ಲವೂ

80. ಜ್ಞಾನಾತ್ಮಕ ಬೆಳವಣಿಗೆಯನ್ನು ಹೀಗೂ ಕರೆಯುವರು

(1) ಸಂವೇಗಾತ್ಮಕ ಬೆಳವಣಿಗೆ (2) ಬೌದ್ಧಿಕ ಬೆಳವಣಿಗೆ

(3) ನೈತಿಕ ಬೆಳವಣಿಗೆ (4) ಸಾಮಾಜಿಕ ಬೆಳವಣಿಗೆ

81. ಒಬ್ಬ ಬುದ್ಧಿವಂತ ವಿದ್ಯಾರ್ಥಿ ಕಲಿಕೆಯಲ್ಲಿ ಹಿಂದುಳಿದಿದ್ದಾಗ ಶಿಕ್ಷಕನಾದವನು ಕೈಗೊಳ್ಳಬೇಕಾದ ಕ್ರಮ(ಗಳು) :

(1) ಆತನಿಗೆ ಹೆಚ್ಚು ಓದುವ ಕೆಲಸ ಕೊಟ್ಟು ಶ್ರಮಪಟ್ಟು ಓದುವಂತೆ ಮಾಡುವುದು

(2) ಆತನಿಗೆ ವೈಯಕ್ತಿಕ ಗಮನ ನೀಡುವುದು ಮತ್ತು ವಿಶೇಷ ಬೋಧನೆ ಆರಂಭಿಸುವುದು

(3) ಆತನ ಕಳಪೆ ಸಾಧನೆಗೆ ಕಾರಣಗಳನ್ನು ಪತ್ತೆ ಹಚ್ಚಿ ಪರಿಹಾರ ಬೋಧನೆ ನೀಡುವುದು

(4) ಆತನಿಗೆ ಮನೆಪಾಠ ವ್ಯವಸ್ಥೆ ಮಾಡುವಂತೆ ಪೋಷಕರಿಗೆ ಹೇಳುವುದು

82. 'ವಿಕಾಸ ಕಾರ್ಯಗಳು' ಎಂಬ ಪರಿಕಲ್ಪನೆಯನ್ನು ಮೊದಲು ಪರಿಚಯಿಸಿದವರು

(1) ಎಲಿಜಬೆತ್ ಹರ್ಲಾಕ್ (2) ರಾಬರ್ಟ್ ಹ್ಯಾವಿಗ್‌ಹರ್ಸ್ಟ್

(3) ಕಾರ್ಲ್ ರೋಜರ್ಸ್ (4) ಕಾರ್ಲ್ ಝೂಂಗ್

83. ಡೇನಿಯಲ್ ಗೋಲೆಮನ್ ಈ ಪರಿಕಲ್ಪನೆಯನ್ನು ಪ್ರಸಿದ್ಧಗೊಳಿಸಿದನು

(1) ಬಹು ಬುದ್ಧಿಶಕ್ತಿ (2) ಕೃತಕ ಬುದ್ಧಿಶಕ್ತಿ

(3) ಸಂವೇಗಾತ್ಮಕ ಬುದ್ಧಿಶಕ್ತಿ (4) ಸಾಮಾಜಿಕ ಬುದ್ಧಿಶಕ್ತಿ



Note: The Information Provided here is only for reference. It May vary the Original.

www.sarkariresults.io



84. ಕೆಳಕಂಡ ಯಾವ ಪರೀಕ್ಷೆಯಲ್ಲಿ ಅಸ್ಪಷ್ಟ ಪ್ರಚೋದನೆಗಳನ್ನು ನೀಡಲಾಗುವುದು ?

(1) ಬುದ್ಧಿಶಕ್ತಿ ಪರೀಕ್ಷೆಗಳು
(2) ಅಭಿಕ್ಷಮತೆ ಪರೀಕ್ಷೆಗಳು
(3) ಪ್ರಕ್ಷೇಪಣೆ ಪರೀಕ್ಷೆಗಳು
(4) ಆಸಕ್ತಿ ತಪಶೀಲು ಪಟ್ಟಿಗಳು

85. ಸಂಚಾರಿ ಸಂಕೇತಗಳ ಪಾಲನೆಯು ಸಂಬಂಧಪಟ್ಟಿರುವುದು

(1) ಅನುಬಂಧಿತ ಕಲಿಕೆಗೆ
(2) ಪ್ರಯತ್ನ-ಪ್ರಮಾದ ಕಲಿಕೆಗೆ
(3) ಒಳನೋಟ ಕಲಿಕೆಗೆ
(4) ಕಲಿಕೆ ವರ್ಗಾವಣೆಗೆ

86. ಒಳಗೊಳ್ಳುವ ಶಿಕ್ಷಣದ ಪ್ರಮುಖ ಉದ್ದೇಶ

(1) ವಿಶೇಷ ಮಕ್ಕಳ ಅಗತ್ಯತೆಯನ್ನು ಪೂರೈಸುವುದು
(2) ಪ್ರತಿಭಾವಂತ ಮಕ್ಕಳ ಅಗತ್ಯತೆಗಳನ್ನು ಪೂರೈಸುವುದು
(3) ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಅಗತ್ಯತೆಗಳನ್ನು ಪೂರೈಸುವುದು
(4) ಎಲ್ಲ ಮಕ್ಕಳ ಅಗತ್ಯತೆಗಳನ್ನು ಪೂರೈಸುವುದು

87. ವಾರ್ಷಿಕ ಪರೀಕ್ಷೆಗಳನ್ನು ನಡೆಸುವುದು

(1) ನಿರಂತರ ಮೌಲ್ಯಮಾಪನ
(2) ಕಲಿಕೆಗಾಗಿ ಮೌಲ್ಯಮಾಪನ
(3) ಕಲಿಕೆಯ ಮೌಲ್ಯಮಾಪನ
(4) ವ್ಯಾಪಕ ಮೌಲ್ಯಮಾಪನ

88. ಒಬ್ಬ ಶಿಕ್ಷಕನಾದವನು ಸಂಪನ್ಮೂಲಭರಿತನಾಗಿರಬೇಕು ಎಂಬುದರ ಅರ್ಥ

(1) ಆತ ಶ್ರೀಮಂತನಾಗಿರಬೇಕು ಆದ್ದರಿಂದ ಆತ ಮನೆಪಾಠ ಮಾಡುವ ಅಗತ್ಯವಿರುವುದಿಲ್ಲ
(2) ಆತ ಪ್ರಭಾವಶಾಲಿಯಾಗಿರಬೇಕು ಆದ್ದರಿಂದ ಆತನಿಗೆ ಯಾರೂ ತೊಂದರೆ ನೀಡಲಾರರು
(3) ಆತನು ತನ್ನ ವಿದ್ಯಾರ್ಥಿಗಳಲ್ಲಿ ತುಂಬಾ ಪ್ರಸಿದ್ಧನಾಗಿರುವುದರಿಂದ ಆತನ ಮೇಲೆ ಮೇಲಧಿಕಾರಿಗಳು ಯಾವುದೇ ದಂಡನಾ ಕ್ರಮ ವಿಧಿಸಲಾಗುವುದಿಲ್ಲ
(4) ಆತನು ಸಾಕಷ್ಟು ಜ್ಞಾನ ಹಾಗೂ ಕೌಶಲಗಳನ್ನು ಹೊಂದಿದ್ದು ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುವುದು

89. ಒಬ್ಬ ಶಿಕ್ಷಕನಾಗಿ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಯಾವ ತಂತ್ರಗಳನ್ನು ಅನುಸರಿಸುವಿರಿ ?

(1) ಪಾಠ ಬೋಧನೆ ಆರಂಭದಲ್ಲಿ ಸೂಕ್ತ ಪೀಠಿಕೆ ನೀಡುವುದು
(2) ಬೋಧಿಸುವಾಗ ಸೂಕ್ತ ಉದಾಹರಣೆಗಳನ್ನು ನೀಡುವುದು
(3) ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು
(4) ಮೇಲಿನ ಎಲ್ಲವೂ

90. ಕೆಳಕಂಡ ಯಾವ ಪ್ರೇರಣೆಗಳನ್ನು ಪ್ರಾಥಮಿಕ ಪ್ರೇರಣೆಗಳೆಂದು ಪರಿಗಣಿಸಲಾಗಿದೆ ?

(1) ಶಾರೀರಿಕ ಪ್ರೇರಣೆಗಳು
(2) ಸಾಮಾಜಿಕ ಪ್ರೇರಣೆಗಳು
(3) ಉತ್ತೇಜಕಗಳು
(4) ಬಹುಮಾನ ಮತ್ತು ಶಿಕ್ಷೆ (ಹೊಗಳಿಕೆ ಮತ್ತು ತೆಗಳಿಕೆ)



Note: The Information Provided here is only for reference. It May vary the Original.